ಪೋಲೀಸರಿಗೆ ದೂರು ಕೊಟ್ಟರೂ ಸಹ ಯಾವ ಕ್ರಮವನ್ನೂ ಅವರು ತೆಗೆದುಕೊಂಡಿಲ್ಲ. ಇಲ್ಲಿ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೋ ತಿಳಿಯದಾಗಿದೆ. ಒಂದು ಕಿಲೋಮೀಟರ್‌ಗೆ ೮–೧೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಇವರಿಗೆ ಸರ್ಕಾರದವರು ಏನಾದರೂ ಒಂದು ನಿರ್ಬಂಧ ಹಾಕಿ ಅದಷ್ಟು ಬೇಗ ಇವರನ್ನು ಹತೋಟಿಗೆ ತರುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರು ತಮ್ಮ ವೈಯಕ್ತಿಕ ಅನುಭವವನ್ನು ಹೇಳಿದ್ದಾರೆ. ಅವರು ಈ ತೊಂದರೆಯನ್ನು ಅನುಭವಿಸಿದಾಗ ಪಿರ್ಯಾದಿ ಏನಾದರೂ ಕೊಟ್ಟಿದ್ದರೆ ಪ್ರಾದೇಶಿಕ ಕಚೇರಿಯವರು ಖಂಡಿತವಾಗಿಯೂ ಕ್ರಮವನ್ನು ತೆಗೆದುಕೊಳ್ಳುತ್ತಿದ್ದರು. ಸೆಕ್ಷನ್ ೬೦ ಪ್ರಕಾರ ಇವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ನಮಗೆ ಬಂದಿರತಕ್ಕ ವರದಿಯ ಪ್ರಕಾರ ಅಧಿಕಾರಿಗಳು ಸುಮಾರು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಇಂಥ ತೊಂದರೆಗಳು ಆದಾಗ ಪ್ರಯಾಣಿಕರು ಸಂಬಂಧಪಟ್ಟ ಕಚೇರಿಗೆ ದೂರನ್ನು ಕೊಡಬೇಕು ಎಂದು ನಾವು ದೈನಂದಿನ ಪತ್ರಿಕೆಗಳಲ್ಲಿ ಪ್ರಕಟಣೆಯನ್ನೂ ಕೂಡ ಕೊಟ್ಟಿದ್ದೇವೆ. ಅದಷ್ಟು ಬೇಗ ಇದರ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಆಟೋ ಚಾಲಕರು ಸಮವಸ್ತ್ರವನ್ನು ಕೂಡ ಹಾಕಿಕೊಳ್ಳುವುದಿಲ್ಲ. ಪ್ರಯಾಣಿಕರ ಜೊತೆಯಲ್ಲಿ ಅಸಭ್ಯ ರೀತಿಯಲ್ಲಿ ವರ್ತನೆ ಮಾಡುತ್ತಾರೆ. ಇದರ ಬಗ್ಗೆ ನಾವು ಆರ್.ಟಿ.ಓ. ಕಚೇರಿಗೆ ತಿಳಿಸಿದರೂ ಏನೂ ಕ್ರಮವನ್ನು ಅವರು ಕೈಗೊಂಡಿಲ್ಲ. ಪೋಲೀಸರು ಸಹ ಯಾವ ಕ್ರಮವನ್ನೂ ಸಹ ಕೈಗೊಂಡಿಲ್ಲ. ಇದನ್ನು ತಾವು ವಿಚಾರ ಮಾಡಿ ಸರಿಪಡಿಸುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ನಾನು ಮೊದಲೇ ತಿಳಿಸಿದಂತೆ ಮಾನ್ಯ ಸದಸ್ಯರುಗಳು ತಮ್ಮ ಅನುಭವವನ್ನು ಹೇಳುತ್ತಿದ್ದಾರೆ. ಇಲ್ಲಿ ಸಾರ್ವಜನಿಕರಿಗೆ ಆಗಿರತಕ್ಕ ಕುಂದು ಕೊರತೆಗಳನ್ನು ಸರಿಪಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಹಗರಿ ಬೊಮ್ಮನಹಳ್ಳಿಯಲ್ಲಿ ಮುನ್ಸಿಫ್ ಕೋರ್ಟು ಅನ್ನು ಸ್ಥಾಪಿಸುವ ಕುರಿತು

೩೦೮ (೧೧) ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಗಿ).—ಮಾನ್ಯ ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೇ?

ಅ) ಬಳ್ಳಾರಿಯ ಹಗರಿ ಬೊಮ್ಮನ ಹಳ್ಳಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಮುನ್ಸಿಫರ್ ನ್ಯಾಯಾಲಯವನ್ನು ಯಾವಾಗ ತೆರೆಯಲಾಗುತ್ತದೆ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳು).—

ಅ) ಹಗರೀಬೊಮ್ಮನ ಹಳ್ಳಿಯಲ್ಲಿ ಪ್ರಸ್ತುತ ಇರುವ ಕೆಲಸದ ಒತ್ತಡವನ್ನು ಗಮನದಲ್ಲಿಟ್ಟುಕೊಂಡು ಉಚ್ಚ ನ್ಯಾಯಾಲಯವು ಸದ್ಯಕ್ಕೆ ಅಲ್ಲಿ ಮುನ್ಸೀಫ್ ಕೋರ್ಟಿನ ಸ್ಥಾಪನೆಯು ಅಗತ್ಯವಿಲ್ಲವೆಂದು ತಿಳಿಸಿರುವುದರಿಂದ, ಈ ವಿಚಾರವನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಕೆ. ಚೆನ್ನಬಸವನಗೌಡ.—ಮಾನ್ಯ ಅಧ್ಯಕ್ಷರೇ ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿರುವವರು ನ್ಯಾಯಾಲಯದ ಕೆಲಸಗಳಿಗೆ ಹಡಗಲಿಗೆ ಹೋಗಬೇಕಾಗಿರುತ್ತದೆ. ಇದು ಹಗರಿಬೊಮ್ಮನಹಳ್ಳಿಯಿಂದ ಸುಮಾರು ೪೦ ಮೈಲಿಗಳ ದೂರದಲ್ಲಿದೆ, ಇದರಿಂದ ರೈತರಿಗೆ ಬಹಳ ತ್ರಾಸ್ ಆಗುತ್ತದೆ. ಈ ದೃಷ್ಟಿಯಿಂದ ಮುಂದಿನ ವರ್ಷವಾದರೂ ಹಗರಿಬೊಮ್ಮನಹಳ್ಳಿಯಲ್ಲಿ ಮುನ್ಸೀಫ್ ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಆಲೋಚನೆ ಮಾಡುತ್ತಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಪರಿಸ್ಥಿತಿಯಲ್ಲಿ ಬದಲಾವಣೆಯಾದರೆ ಹೈಕೋರ್ಟಿನವರು ಇದಕ್ಕೆ ಸಮ್ಮತಿ ಕೊಟ್ಟರೆ ನನ್ನ ಅಭ್ಯಂತರವೇನೂ ಇರುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಮುನ್ಸೀಫ್ ಕೋರ್ಟುಗಳನ್ನು ತೆರೆಯಬೇಕು ಎಂದು ಸರ್ಕಾರದ ಉದ್ದೇಶವಿದೆ, ಎಷ್ಟು ಕೋರ್ಟುಗಳು ಬೇಕು ಎಂದು ಹೈಕೋರ್ಟಿನವರು ಶಿಫಾರಸ್ ಮಾಡಿದ್ದಾರೆಂದು ತಿಳಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಆ ಮಾಹಿತಿ ನನ್ನಲ್ಲಿಲ್ಲ, ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಕೇಳಿದರೆ ಖಂಡಿತವಾಗಿಯೂ ಉತ್ತರವನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸರ್ಕಾರದವರು ಇದರ ಬಗ್ಗೆ ರೆಕಮೆಂಡ್ ಮಾಡಿ ಹೈಕೋರ್ಟಿಗೆ ಕಳುಹಿಸಿದ್ದಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಏನೇನು ಇರಬೇಕೋ ಅದನ್ನು ಕಾನೂನು ಪ್ರಕಾರವಾಗಿ ನೋಡಿ ಅವುಗಳು ಇಲ್ಲದ್ದರಿಂದ ಸದ್ಯಕ್ಕೆ ಅಲ್ಲಿ ಕೋರ್ಟು ಸ್ಥಾಪನೆ ಮಾಡತಕ್ಕ ಅವಶ್ಯಕತೆ ಇಲ್ಲ ಎಂದು ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಹಿರೋಜ ಎಸ್. ಲಾಡ್.—ಸಂಡೂರು ತಾಲ್ಲೂಕಿನಲ್ಲಿಯೂ ಒಂದು ಮುನ್ಸೀಫ್ ಕೋರ್ಟು ಆಗಬೇಕಾಗಿದೆ, ಅದನ್ನು ತಾವು ಮಾಡಿಕೊಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ನಮಗೆ ಮಾನ್ಯ ಸದಸ್ಯರಿಂದ ಅರ್ಜಿ ಬರಬೇಕು, ಅದನ್ನು ಹೈಕೋರ್ಟಿನವರು ಒಪ್ಪಿಕೊಂಡರೆ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ವಾಗುತ್ತದೆ. ಮಾನ್ಯ ಸದಸ್ಯರು ನನ್ನ ಹತ್ತಿರವೂ ಬಂದು ಹೇಳಿದ್ದಾರೆ ಕೋರ್ಟುಗಳನ್ನು ಸ್ಥಾಪನೆ ಮಾಡತಕ್ಕ ಅಧಿಕಾರ ನಮ್ಮ ಕೈಯಲ್ಲಿ ಇಲ್ಲ ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಕೆ. ಚೆನ್ನಬಸವನಗೌಡ.—ಕೋರ್ಟನ್ನು ಸ್ಥಾಪನೆ ಮಾಡುವುದಕ್ಕೆ ಏನೇನು ಆವಶ್ಯಕತೆಗಳು ಇರಬೇಕು ಎನ್ನುವುದನ್ನು ಸ್ವಲ್ಪ ವಿವರವಾಗಿ ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಇದೇ ಸದನದಲ್ಲಿ ನಾನು ಈ ಬಗ್ಗೆ ಅನೇಕ ಸಲ ಉತ್ತರ ಕೊಟ್ಟಿದ್ದೇನೆ, ೧೯೬೪ರ ಸಿವಿಲ್ ಕೋರ್ಟ್ ಆಕ್ಟ್ ಪ್ರಕಾರ ಒಂದು ಕೋರ್ಟನ್ನು ಸ್ಥಾಪನೆ ಮಾಡ ಬೇಕಾದರೆ ಸಿವಿಲ್ ಮೊಕದ್ದಮೆಗಳು ಎಷ್ಟು ಇರಬೇಕು, ಕ್ರಿಮಿನಲ್ ಮೊಕದ್ದಮೆಗಳು ಇಷ್ಟು ಇರಬೇಕು, ಮಿಸಲೇನಿಯಸ್ ಮೊಕದ್ದಮೆಗಳು ಇಷ್ಟು ಇರಬೇಕು, ದಂಡ ಸಂಹಿತೆಯ ಕೆಳಗೆ ಇಷ್ಟು ಕೇಸ್‌ಗಳು ಇರಬೇಕು ಎಂದು ಒಂದು ಮಾಪನ ಇರುತ್ತದೆ ಈ ಮಾಪನಕ್ಕೆ ಸರಿಯಾದ ರೀತಿಯಲ್ಲಿ ಮೊಕದ್ದಮೆಗಳು ಬಂದರೆ ಹೈಕೋರ್ಟಿನವರು ಅದಕ್ಕೆ ಒಪ್ಪಿಗೆ ಕೊಡತಕ್ಕದ್ದು ಇದೆ.

ಹುಬ್ಬಳ್ಳಿ ವಿಭಾಗದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ದರಗಳನ್ನು ಹೆಚ್ಚಿಸುವುದು

(೪೫) ಶ್ರೀ ಎಂ. ಜಿ. ಜರತಾರ್‌ಗರ್ (ಹುಬ್ಬಳ್ಳಿ).— ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹುಬ್ಬಳ್ಳಿ ವಿಭಾಗೀಯ ಅಧಿಕಾರಿಗಳು ಹುಬ್ಬಳ್ಳಿ ಯಿಂದ ಧಾರವಾಡಕ್ಕೆ ಹೋಗುವ ಎಕ್ಸ್‌ಪ್ರೆಸ್ ದರವನ್ನು ೯೦ ನಯಾಪೈಸೆ ಇದ್ದುದ್ದು ರೂ. ೧-೨೦ಕ್ಕೆ ಏರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರು ಕೇಂದ್ರ ಕಛೇರಿಯವರು ಮೇಲ್ಕಂಡ ದರ ಹೆಚ್ಚಿಸಿದ್ದು ಯಾವ ತಾರೀಖಿ ನಿಂದಾ ಹಾಗೂ ಅದನ್ನು ಮುಂಚಿತವಾಗಿ ನಾಗರೀಕರಿಗೆ ಪತ್ರಿಕೆಯ ಮೂಲಕ ತಿಳಿಯ ಪಡಿಸದೆ, ಇರುವುದಕ್ಕೆ ಕಾರಣಗಳೇನು?

ಇ) ಸತತ ಜನ ದಟ್ಟನೆವಿದ್ದಾಗ್ಯೂ ಹೆಚ್ಚಿನ ಲಾಭ ಈ ವಿಭಾಗದಲ್ಲಿ ಜರುಗುತ್ತಿದ್ದಾಗ್ಯೂ ಈ ರೀತಿ ಮಧ್ಯದಲ್ಲಿ ದರವನ್ನು ಹೆಚ್ಚಿಸಲು ಕಾರಣವೇನು?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು).—

ಅ) ಬಂದಿದೆ.

ಆ) ನಗರ ಮತ್ತು ಉಪನಗರಗಳಲ್ಲಿ ಓಡಿಸುತ್ತಿರುವ ಎಕ್ಸ್‌ಪ್ರೆಸ್, ತಡೆರಹಿತ ಮತ್ತು ಕೆಲವೇ ಕಡೆಗಳಲ್ಲಿ ನಿಲ್ಲುವ ಬಸ್ಸುಗಳಲ್ಲಿಯ ಪ್ರಯಾಣ ದರವನ್ನು ೫-೬-೧೯೮೩ರಿಂದ ಜಾರಿಗೆ